ಓ ಎಸ್ ನಂಃ 278/2019
ಡಿ ಡಬ್ಲ್ಯೂ ಃ 2

ದಿಃ 24.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಎಲ್ ಎಸ್ ವಕೀಲರಿಂದಃ

ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ನಮ್ಮ ವಕೀಲರು ನನ್ನ ಸಮಕ್ಷಮ ಟೈಪ್ ಮಾಡಿಸಿರುತ್ತಾರೆ. ದಾವಾ ಸ್ವತ್ತಿಗೂ ಮತ್ತು ತಮ್ಮ ಸ್ವತ್ತಿಗೂ ಎಷ್ಟು ಅಂತರ ಇದೆ ಎಂದರೆ ದಾವಾ ಸ್ವತ್ತಿನ ಅಕ್ಕ ಪಕ್ಕ ಇದೆ ಎಂದು ನುಡಿಯುತ್ತಾರೆ. ತಮಗೆ ಸೇರಿದ ಜಮೀನಿನಲ್ಲಿ ತಾವು ಸ್ವಾಧೀನಾನುಭವದಲ್ಲಿದ್ದೀರಿ ಎಂದು ತೋರಿಸಲು ಯಾವ ದಾಖಲಾತಿಯನ್ನು ಕೊಟ್ಟಿದ್ದೀರಿ ಎಂದರೆ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿನ ಪಕ್ಕದ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದೀರಿ ಎಂದು ತೋರಿಸಲು ಯಾವ ದಾಖಲಾತಿಯನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ರೇಷ್ಮೆ ಮನೆಯನ್ನು ಕಟ್ಟಿಸಿಕೊಂಡು ಅಲ್ಲೆ ವ್ಯವಸಾಯ ಮಾಡಿಕೊಂಡು ಇರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿದ್ದು ಸಾಕ್ಷಿಯ ಒಪ್ಪಿಗೆಯ ಮೇರೆಗೆ ಸದರಿ ಛಾಯಾ ಚಿತ್ರವನ್ನು **ನಿಪಿ 42** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 42 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಮನೆಯು ಪ್ರತಿವಾದಿಗಳ ಮನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಸಿರುತ್ತಾರೆ ಸದರಿ ಮನೆಗೆ ಆಗಾಗ ಹೋಗಿ ಬರುತ್ತಾರೆ. ಸದರಿ ಮನೆಗೆ ವಿಧ್ಯುತ್ ಮೀಟರ್ ಇದೆಯಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ವಿರೂಪಾಕ್ಷಯ್ಯನವರ ಜಮೀನು, ಪಶ್ಚಿಮಕ್ಕೆ ಕೆಂಪಯ್ಯನ ದೊಡ್ಡಿ ಗ್ರಾಮಸ್ಥರ ಜಮೀನು, ಉತ್ತರಕ್ಕೆ ನಮ್ಮ ತಂದೆಯವರ ಜಮೀನು, ದಕ್ಷಿಣಕ್ಕೆ ನಕಾಶೆ ರಸ್ತೆ ಇದೆ. ದಾವಾ ಸ್ವತ್ತಿನಲ್ಲಿ ಸುಖನ್ಯಾರವರು ಮಾವಿನ ತೋಟ ಹಾಕಿರುತ್ತಾರೆ. ದಾವಾ ಸ್ವತ್ತಿಗೆ ಸುತ್ತಲು ವಾದಿಯು ಬೇಲಿ ಹಾಕಿಸಿರುತ್ತಾರೆ ಮತ್ತು ಒಂದು ಗೇಟನ್ನು ಸಹ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಾವು ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಇಲ್ಲದಿದ್ದರೂ ಸಹ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಮಾವಿನ ಮರಗಳನ್ನು ವಾದಿಯೆ ಬೇರೆಯವರಿಗೆ ಭೋಗ್ಯಕ್ಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ಓ ಎಸ್ ನಂಃ 278/2019
ಡಿ ಡಬ್ಲ್ಯೂ ಃ 2

**ಮರು ವಿಚಾರಣೆ ಇಲ್ಲ.**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.

ಓ ಎಸ್ ನಂಃ 278/2019
**ಡಿ ಡಬ್ಲ್ಯೂ ಃ 3**

**ದಿಃ 24.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಎಲ್ ಎಸ್ ವಕೀಲರಿಂದಃ**

ಪ್ರತಿವಾದಿಗಳು ನಮ್ಮ ಗ್ರಾಮದ ವಾಸಿಗಳು. ಈ ದಾವೆಯನ್ನು ಯಾರು ಯಾರ ಮೇಲೆ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿಗಳು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ವಿರೂಪಾಕ್ಷಯ್ಯನವರ ಜಮೀನು, ಪಶ್ಚಿಮಕ್ಕೆ ಗೌಡರ ಜಮೀನು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ, ಉತ್ತರಕ್ಕೆ ರಾಜಣ್ಣನವರ ಜಮೀನು, ದಕ್ಷಿಣಕ್ಕೆ ಸರ್ಕಾರಿ ಓಣಿ. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿದ್ದು ಸದರಿ ಛಾಯಾಚಿತ್ರದಲ್ಲಿರುವ ಜಮೀನು ದಾವಾ ಸ್ವತ್ತು ಆಗಿದ್ದು ಸಾಕ್ಷಿಯ ಒಪ್ಪಿಗೆಯ ಮೇರೆಗೆ ಸದರಿ ಛಾಯಾ ಚಿತ್ರವನ್ನು **ನಿಪಿ 43** ಎಂದು ಗುರುತಿಸಲಾಯಿತು. ನಿಪಿ 43 ರ ಛಾಯಾ ಚಿತ್ರದಲ್ಲಿ ಇರುವ ವ್ಯಕ್ತಿಗಳು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿದ್ದು ಸದರಿ ಛಾಯಾಚಿತ್ರವನ್ನು ಸಾಕ್ಷಿಯ ಒಪ್ಪಿಗೆಯ ಮೇರೆಗೆ **ನಿಪಿ 44** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 44 ರ ಛಾಯಾ ಚಿತ್ರದಲ್ಲಿ ಕಾಣಿಸುತ್ತಿರುವ ಮನೆಯನ್ನು ಉಮೇಶಯ್ಯ ರವರು ನಿರ್ಮಾಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 44 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ವ್ಯಕ್ತಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಮನೆಯನ್ನು ಹೊರತು ಪಡಿಸಿ ದೇವಸ್ಥಾನ ಸಹ ಇದೆ. ದಾವಾ ಸ್ವತ್ತಿನ ಸುತ್ತಲೂ ಬೇಲಿಯನ್ನು ಹಾಕಿಸಿ ಮತ್ತು ಒಂದು ಗೇಟನ್ನು ಇಟ್ಟಿರುತ್ತಾರೆ ಎಂದರೆ ಸರಿ. ಸದರಿ ಬೇಲಿಯನ್ನು ಉಮೇಶಯ್ಯ ರವರು ಹಾಕಿಸಿರುತ್ತಾರೆ. ದಾವಾ ಸ್ವತ್ತಿನಲ್ಲಿ ಯಾರು ವಾಸ ಮಾಡುತ್ತಿಲ್ಲ. ದಾವಾ ಸ್ವತ್ತಿನಲ್ಲಿ ಇರುವ ಮನೆಗೆ ವಿದ್ಯುತ್ಶಕ್ತಿ ಸಂಪರ್ಕವನ್ನು ಪಡೆದುಕೊಂಡಿದ್ದಾರ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ತಾವು ಖುದ್ದಾಗಿ ನೋಡಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು ದಾವಾ ಸ್ವತ್ತಿನಲ್ಲಿರುವ ಮನೆಯಲ್ಲಿಯೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಮಾವಿನ ತೋಟ ಮತ್ತು ಅಲ್ಲಲ್ಲಿ ಹುಣಸೇ ಮರ ಇದೆ. ದಾವಾ ಸ್ವತ್ತಿನಲ್ಲಿರುವ ಮಾವಿನ ಮರಗಳ ಫಸಲನ್ನು ವಾದಿಯು ಬೇರೆಯವರಿಗೆ ಭೋಗ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಪಿ 1 ರ ಕ್ರಯದ ಕರಾರು ಪತ್ರವನ್ನು ವಾದಿಗೆ ಮಾಡಿಕೊಟ್ಟ ದಿನಾಂಕದಿಂದ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿರುವ ಮಾವಿನ ಫಸಲನ್ನು

ಬೇರೆಯವರಿಗೆ ಭೋಗ್ಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**

**ಓ ಎಸ್ ನಂಃ 278/2019**
**ಡಿ ಡಬ್ಲ್ಯೂ ಃ 4**

**ದಿಃ 24.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಎಲ್ ಎಸ್ ವಕೀಲರಿಂದಃ**

ನಿಪಿ 42 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಜಮೀನು ದಾವಾ ಸ್ವತ್ತು ಆದರೆ ನಿಪಿ 42 ರಲ್ಲಿ ಕಾಣಿಸುತ್ತಿರುವ ವ್ಯಕ್ತಿ ನನಗೆ ಗೊತ್ತಿಲ್ಲ. ನಿಪಿ 42 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಮನೆಯನ್ನು ವಾದಿಯೇ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 1 ರ ಕ್ರಯದ ಕರಾರು ಪತ್ರಕ್ಕೆ ತಾವು ಸಹಿ ಮಾಡುವ ಸಂದರ್ಭದಲ್ಲಿ ಅಲ್ಲಿ ಯಾರು ಯಾರು ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ರ ಕ್ರಯದ ಕರಾರು ಪತ್ರಕ್ಕೆ ನೋಂದಣಿ ಕಛೇರಿ, ಮಾಗಡಿಯಲ್ಲಿ ಸಹಿಯನ್ನು ಹಾಕಿರುತ್ತೇನೆ. ನಿಪಿ 1 ರ ಕ್ರಯದ ಕರಾರು ಪತ್ರಕ್ಕೆ ತಾವು ಸಹಿಯನ್ನು ಮಾಡುವ ಸಂದರ್ಭದಲ್ಲಿ ವಾದಿ ಮತ್ತು ಪ್ರತಿವಾದಿಗಳನ್ನು ತಾವು ನೋಡಿದ್ದೀರ ಎಂದರೆ ಸಾಕ್ಷಿಯು ತಾನು ಪ್ರತಿವಾದಿಗಳನ್ನು ಮಾತ್ರ ನೋಡಿದ್ದೀನಿ ಎಂದು ನುಡಿಯುತ್ತಾರೆ. ನಿಡಿ1 ರ ಕ್ರಯದ ಕರಾರು ಪತ್ರದಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು **ನಿಡಿ 1(ಸಿ)** ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**